# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂಃ 1096/2020

| | | | |
|---|---|---|---|
| ಸಾಕ್ಷಿದಾರರ ಹೆಸರು | – | ದಯಾನಂದ | ಸಿಡಬ್ಲ್ಯೂ–11 |
| ತಂದೆಯ/ಗಂಡನ ಹೆಸರು | – | ಚಂದ್ರಕಾಂತ್ ಸಸ್ತೆ | ಪಿಡಬ್ಲ್ಯೂ–9 |
| ವಯಸ್ಸು | – | ಸು.33 ವರ್ಷ | ಪ್ರ.ವ.ಬೋ ದಿನಾಂಕಃ25.09.2025 |
| ಉದ್ಯೋಗ | – | ವ್ಯವಹಾರ | |
| ವಾಸ | – | ಪುಣೆ ನಗರ | |

**ಸಾಕ್ಷಿಗೆ ಕನ್ನಡ ಬರುವುದಿಲ್ಲ. ಹಿಂದಿ ಮಾತ್ರ ಮಾತನಾಡುತ್ತಾರೆ. ನ್ಯಾಯಾಧೀಶರಿಗೆ, ಸರ್ಕಾರಿ ಅಭಿಯೋಜಕರಿಗೆ ಮತ್ತು ಆರೋಪಿ ಪರ ವಕೀಲರಿಗೆ ಹಿಂದಿ ಮಾತನಾಡಲು ಮತ್ತು ಅರ್ಥವಾಗುವುದರಿಂದ ಸಾಕ್ಷಿಯ ವಿಚಾರಣೆಯನ್ನು ತೆಗೆದುಕೊಳ್ಳಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ–**

1. ನನಗೆ ಆರೋಪಿಯ ಪರಿಚಯ ಇರುವುದಿಲ್ಲ. ನಾನು ಲಾರಿ ಸಂಖ್ಯೆಃಎಂಹೆಚ್–14–ಜಿಯು–8052 ನೇದ್ದರ ನೋಂದಣಿ ಮಾಲೀಕನಾಗಿರುತ್ತೇನೆ. ಈಗ ಸುಮಾರು 4–5 ವರ್ಷಗಳ ಹಿಂದೆ ಅಪಘಾತ ಪ್ರಕರಣದಲ್ಲಿ ಪೊಲೀಸ್‌ರು ನನ್ನ ವಾಹನವನ್ನು ವಶಪಡಿಸಿಕೊಂಡಿದ್ದರು. ನಾನು ಠಾಣೆಗೆ ವಾಹನವನ್ನು ಬಿಡಿಸಿಕೊಳ್ಳಲು ಹೋದಾಗ ಪೊಲೀಸ್‌ರು ಕೆಲವೊಂದು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಯು ನಿಪಿ–8 ಮತ್ತು 9 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು **ನಿಪಿ–8(ಬಿ) ಮತ್ತು ನಿಪಿ–9(ಬಿ)** ಎಂದು ಗುರುತಿಸಲಾಯಿತು. ನಿಪಿ–8 ಮತ್ತು 9 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ನಿಪಿ–10 ಇಂಡೆಮ್ನಿಟಿ ಬಾಂಡ್ ಬರೆದುಕೊಟ್ಟು ನನ್ನ ವಾಹನವನ್ನು ಬಿಡಿಸಿಕೊಂಡಿರುತ್ತೇನೆ. ನಿಪಿ–10 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–10(ಬಿ)** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ–ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ–ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ–ಸವಾಲುಃ ಮಾನ್ಯ ಎಪಿಪಿಯವರಿಂದಃ–**

2. ದಿನಾಂಕಃ28.05.2019 ರಂದು ಪೊಲೀಸ್‌ರು ಅಪಘಾತದಲ್ಲಿ ನನ್ನ ವಾಹನ ವಶಪಡಿಸಿಕೊಂಡಿದ್ದರ ಬಗ್ಗೆ ತಿಳಿಸಿದ್ದು ನಾನು ಪೊಲೀಸ್ ಠಾಣೆಗೆ ಹೋದಾಗ ಪೊಲೀಸ್‌ರು ನನಗೆ ನಿಪಿ–8 ರಂತೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಅಪಘಾತದ ದಿನ ನನ್ನ ವಾಹನವನ್ನು ಸಂತೋಷ್ ತಾಂಡಲೆ ಸಂದೆ ಕಿಶನ್ ಅವರು ಚಲಾಯಿಸುತ್ತಿದ್ದರು ಎಂದು ನಿಪಿ–9 ರಂತೆ ಉತ್ತರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಂತೋಷ್ ತಾಂಡಲೆ ಈ ಪ್ರಕರಣದಲ್ಲಿರುವ ಆರೋಪಿಯಾಗಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–9 ರಲ್ಲಿ ಅಪಘಾತದ ದಿನ ಈ ಪ್ರಕರಣದ ಆರೋಪಿ ವಾಹನವನ್ನು ಚಲಾಯಿಸುತ್ತಿದ್ದು ಎಂದು ಉತ್ತರ ನೀಡಿದ್ದರೂ ಸಹ ಇಲ್ಲ ಎಂದು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ ಎಸ್.ಎಂ.ಆರ್. ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.